# ಆರೋಗ್ಯವೇ ಪರಮ ಭಾಗ್ಯ

## ಇದು ಸರ್ಕಾರದ ಮೂಲಮಂತ್ರ

■ ಶೃಂಗ ರವಿ

ಮನುಷ್ಯ ಜೀವನಕ್ಕೆ ಯಾವುದಾದರೂ ಪರಮ ಭಾಗ್ಯ ಎಂಬುದಿದ್ದರೆ, ಅದು ಆರೋಗ್ಯ ಭಾಗ್ಯ. ದೈಹಿಕ ಮತ್ತು ಮಾನಸಿಕ ಆರೋಗ್ಯ ಇದ್ದರೆ, ಜಗತ್ತಿನಲ್ಲಿ ಆತ ಏನನ್ನು ಬೇಕಾದರೂ ಜೈಸಬಲ್ಲ ಮತ್ತು ಅಸಾಧ್ಯವನ್ನೂ ಸಾಧ್ಯವಾಗಿಸಬಲ್ಲ. ಸಂತೃಪ್ತ ಜೀವನಕ್ಕೆ ಆರೋಗ್ಯವೇ ನಿಜವಾದ ಭಾಗ್ಯ. ಯಾವುದೇ ಒಂದು ದೇಶ ಅಥವಾ ರಾಜ್ಯ ಅಭಿವೃದ್ಧಿ ಹೊಂದಿದೆ ಎಂದು ಸಾಬೀತು ಆಗಬೇಕಿದ್ದರೆ ಅಲ್ಲಿನ ಪ್ರಜೆಗಳು ಆರೋಗ್ಯವಂತರಾಗಿರಬೇಕು. ಆಗ ಮಾತ್ರ ಕಲ್ಯಾಣ ರಾಜ್ಯ ಎನ್ನಬಹುದು. ಕರ್ನಾಟಕವನ್ನು ನಿಸ್ಸಂದೇಹವಾಗಿ 'ಕಲ್ಯಾಣ ರಾಜ್ಯ' ಎನ್ನಬಹುದು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಆರೋಗ್ಯ ಕ್ಷೇತ್ರದಲ್ಲಿ ಕ್ರಾಂತ್ರಿಕಾರಿ ಹೆಜ್ಜೆಗಳನ್ನು ಇಟ್ಟಿರುವುದು ಅದಕ್ಕೆ ಸಾಕ್ಷಿ. ಬರೀ ಹೇಳಿಕೆಗಳಿಗಷ್ಟೇ ಸೀಮಿತವಾಗಿಲ್ಲ. ಹೇಳಿದ್ದನ್ನು ಕಾರ್ಯಗತಗೊಳಿಸಿದೆ.

21ನೇ ಶತಮಾನಕ್ಕೆ ಕಾಲಿಟ್ಟಿದ್ದೇವೆ. ಮನುಷ್ಯನ ಬದುಕಿಗೆ ಸಂಬಂಧಿಸಿದ ಎಲ್ಲ ಕ್ಷೇತ್ರಗಳೂ ನಾಗಾಲೋಟದಲ್ಲಿ ಓಡುತ್ತಿವೆ. ಈ ನಾಗಾಲೋಟದ ಎಳೆ ಹಿಡಿದು ಓಡುತ್ತಿರುವ ಮನುಷ್ಯನಿಗೆ ತನ್ನ ಇಹ–ಪರ, ತನು ಮನದ ಪರಿವೆಯೇ ಇಲ್ಲ. ಆಹಾರ ಪದ್ಧತಿ, ಜೀವನ ಶೈಲಿ, ನಗರೀಕರಣ, ತಂತ್ರಜ್ಞಾನ, ಮಾನವ ಸಂಬಂಧಗಳಲ್ಲಿ ದೊಡ್ಡ ಸ್ಥಿತ್ಯಂತರವೇ ಆಗಿದೆ. ಇದು ಆತನ/ ಆಕೆಯ ಆರೋಗ್ಯದ ಮೇಲೂ ಪರಿಣಾಮ ಬೀರಿದೆ. ಇದಕ್ಕೆ ಪೂರಕವಾಗಿ ಆರೋಗ್ಯ ಇಲಾಖೆ ಕಾರ್ಯ ನಿರ್ವಹಿಸಲೇಬೇಕು. ಯಾವುದೇ ಸೂಕ್ಷ್ಮ ಸಂವೇದನೆಯ ಸರ್ಕಾರ ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಜನಪರ ಆರೋಗ್ಯ ನೀತಿಯನ್ನು ರೂಪಿಸಿ ಕಾರ್ಯಗತಗೊಳಿಸುತ್ತದೆ. ಸಿದ್ದರಾಮಯ್ಯ ಸರ್ಕಾರ ಮಾಡಿದ್ದೂ ಅದನ್ನೇ. ಕೆ.ಆರ್.ರಮೇಶ್ ಕುಮಾರ್ ಆರೋಗ್ಯ ಸಚಿವರಾದ ಬಳಿಕ, ಅತ್ಯಂತ ದುಬಾರಿ ಎನಿಸಿದ ಚಿಕಿತ್ಸೆಗಳೂ ಬಡವರಿಗೆ ಉಚಿತವಾಗಿ ಸಿಗಲಾರಂಭಿಸಿದೆ. ಖಾಸಗಿ ವೈದ್ಯಕೀಯ ಕ್ಷೇತ್ರದಲ್ಲಿ ಕೆಲವರು ನಡೆಸುವ ಸುಲಿಗೆಯನ್ನು ತಡೆಗಟ್ಟಲು ಕೆಪಿಎಂಪಿ ಕಾಯ್ದೆಯನ್ನು ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲೂ ಜಾರಿಗೆ ತರುವಲ್ಲಿ ಅವರು ಯಶಸ್ವಿಯಾದರು.

ಸಾರ್ವತ್ರಿಕ ಆರೋಗ್ಯ ರಕ್ಷಣೆ, ಜನಸ್ನೇಹಿ ಆಸ್ಪತ್ರೆಗಳು, ಉಚಿತ ಡಯಾಲಿಸಿಸ್ ಘಟಕಗಳು, ಸಿ.ಟಿ.ಸ್ಕ್ಯಾನ್, ಎಂಆರ್‌ಐ ಸ್ಕ್ಯಾನ್ ಉಪಕರಣಗಳು, ಜನೌಷಧಿ ಮಳಿಗೆಗಳು, ಐ.ಸಿ.ಯು ಸೌಲಭ್ಯ, ಇ–ಆಸ್ಪತ್ರೆ, ಆರೋಗ್ಯ ವಿಸ್ತರಣಾ ಚಿಕಿತ್ಸಾಲಯ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ತಾವು ಕೈಗೊಂಡ ಸರ್ಕಾರದ ಕಾರ್ಯಗಳನ್ನು ವಿವರಿಸುತ್ತಾ ಆರೋಗ್ಯ ಸಚಿವರು ಹೇಳುವುದು ಹೀಗೆ. 'ಯಾವ ಸರ್ಕಾರ ತನ್ನ ಪ್ರಜೆಗಳ ಆರೋಗ್ಯವನ್ನು ಕಾಪಾಡುವ ಶಕ್ತಿ, ಸಾಮರ್ಥ್ಯ ಮತ್ತು ಆಲೋಚನೆ ಹೊಂದಿರುತ್ತದೆಯೊ, ಅಂತಹ ಸರ್ಕಾರ ಮಾತ್ರ ಯೋಗ್ಯ ಸರ್ಕಾರ ಎನಿಸಿಕೊಳ್ಳುತ್ತದೆ. ಆ 'ಯೋಗ್ಯತೆ' ಮೌಲ್ಯವನ್ನು ಸರಿಗಟ್ಟುವ






ಕಲಬುರಗಿಯ ಮಂದೇವಾಲದಲ್ಲಿ ಆಸ್ಪತ್ರೆ ಸಿಬ್ಬಂದಿಯಿಂದ ಬಾಣಂತಿ ಮತ್ತು ಮಗುವಿನ ಭೇಟಿ



‘‘ಎಲ್ಲರಿಗೂ ಆರೋಗ್ಯ; ಎಲ್ಲೆಡೆಯೂ ಆರೋಗ್ಯ’’